"ಹೌದಲ್ಲ, ಹೊಳಿಲೇ ಇಲ್ಲ ನೋಡು. ನಾವೆಲ್ಲಾ ಮೊನ್ನೆ ನೋಡಿಕೊಂಡು ಬಂದೆವು. ತುಂಬಾ ಚೆಂದ ಉಂಟು ಮಾರಾಯ. ನೀವು ಮತ್ತೆ ನಾಗಕ್ಕ ಹೋಗಿ ಬನ್ನಿ. ಕರಿಯಕ್ಕ, ಬೇಕಾದ್ರೆ ಮಕ್ಕಳನ್ನ ಜೊತೆ ಮಾಡಿ ಕಳಿಸ್ತೇನೆ." ಎಂದು ರಾಮಣ್ಣ ಹೇಳುತ್ತಿರುವಾಗಲೇ, ಮರಳಿ ಬಂದ ನಾಗಕ್ಕ, "ಎಲ್ಲಿಗೆ ಹೋಗುವುದು, ನಾನು ಬರ್ತೇನೆ'' ಎಂದಳು.

"ನನಗೆ ಸಂಜೆಯಾಗ್ತಿದ್ದಂತೆ ಮಂಡಿ ನೋವು ಹೆಚ್ಚಾಗ್ತದೆ ಅಂತ ಗೊತ್ತಿಲ್ಲವ? ಹೇಗೂ ನಿನಗೂ ಸುಸ್ತಾಗಿದೆ. ಸುಮ್ಮನೆ ಇರು. ಕಾರಂಜಿ ಓಡಿ ಹೋಗುವುದಿಲ್ಲ. ಮುಂದಿನ ವಾರ ಶೆಟ್ರ ಮನೆ ಪೂಜೆಗೆ ಬರ್ತೇವಲ್ಲಾ ಆಗ ನೋಡಿದರಾಯ್ತು."

"ನಾನೀಗ ಮಲಗಿದರೆ ಸಂಜೆ ಹೊತ್ತಿಗೆ ಸುಸ್ತು ಕಡಿಮೆ ಆಗ್ತದೆ. ನೀನು ಮುಂದಿನ ಸಲವೂ ಸಂಜೆಯ ಮಂಡಿ ನೋವಿನ ನೆಪ ಹೇಳ್ತಿ ಅಂತ ಗೊತ್ತು. ನೀನು ಬರದಿದ್ದರೆ ಪರವಾಗಿಲ್ಲ, ನಾನೊಬ್ಬೆ ಹೋಗ್ತೀನಿ" ಎಂದು ದೃಢವಾಗಿ ಹೇಳಿದಳು ನಾಗಕ್ಕ.

ಮಗಳೇಕೋ ನಿನ್ನೆಯಿಂದ ವಿಪರೀತವಾಗಿ ಆಡುತ್ತಿದ್ದಾಳೆ ಎಂದೆನಿಸಿದರೂ ಅನ್ಯರ ಮುಂದೆ ಜಗಳವೇಕೆಂದು ಕರಿಯಕ್ಕ, "ಆಯ್ತು, ಆದರೆ ಸರೋಜ ಅಥವಾ ನಿಮ್ಮಿಯನ್ನು ಜೊತೆ ಮಾಡಿಕೊಂಡು ಹೋಗು'' ಎಂದಳು.

ಸೊಸೆಯರನ್ನು ಜೊತೆಗೆ ಕಳಿಸಿದರೆ ಅಲ್ಲಿ ಪಾನಿಪುರಿ, ಬೇಲ್ಪುರಿ ದುಡ್ಡೆಲ್ಲಾ ತಮ್ಮಿಂದಲೇ ವಸೂಲಿಯಾಗುತ್ತದೆ ಎಂಬ ಗಾಬರಿಯಲ್ಲಿ ಅಜ್ಜಮ್ಮ, "ಅಯ್ಯೋ, ಹಸುಗಳು ಕೊಟ್ಟಿಗೆಗೆ ಬರುವ ಹೊತ್ತು, ಅವರಿಬ್ಬರಿಗೆ ಪುರುಸೊತ್ತು ಎಲ್ಲಿದೆ? ಮಕ್ಕಳ ಜೊತೆ ಹೋಗಿ ಬರಲಿ" ಎಂದರು. ಕರಿಯಕ್ಕ ಒಲ್ಲದ ಮನಸ್ಸಿನಿಂದಲೇ ಗೋಣಾಡಿಸಿದಳು.

"ರಾಮಣ್ಣ, ಗಿರಣಿ ಕಡೆ ಹೋಗಲಿಕ್ಕೆ ಉಂಟು ಅಂದಿರಲ್ಲ, ಬನ್ನಿ ನಾನೇ ಬಿಡ್ತೇನೆ" ಎಂದು ರಾಮಣ್ಣನನ್ನು ಕರೆದುಕೊಂಡು ಅಲ್ಲಿಂದ ಹೊರಟ ಮಹೇಶ.

'ಸದ್ಯ, ರಾಧುವಿನ ಮಗ ತೊಲಗಿದನಲ್ಲ' ಎಂದು ಖುಷಿಪಟ್ಟಳು ಕರಿಯಕ್ಕ. ತನ್ನ ಚಿನ್ನದ ಮೊಟ್ಟೆಯಿಡುವ ಕೋಳಿಯ ಸುತ್ತ ಹುಂಜಗಳು ಸುತ್ತಾಡದಂತೆ ನೋಡಿಕೊಳ್ಳುವುದೇ ಅವಳ ಪಾಲಿಗೆ ಸವಾಲಾಗಿತ್ತು.

ಪಾರು ಮತ್ತು ಚೇತು ನಾಗಕ್ಕನ ಜೊತೆ ಗೋಪಾಲನ ದೇವಾಸ್ಥಾನಕ್ಕೆ ಹೊರಟರು. ನಾಗಕ್ಕನ ಭಯಾನಕ ಅವತಾರ ನೋಡಿದ್ದ ಮಕ್ಕಳಿಗೆ ಅವಳ ನೆರಳ ಹತ್ತಿರಕ್ಕೂ ಸುಳಿಯುವುದು ಬೇಕಿರಲಿಲ್ಲ. ದೊಡ್ಡವರ ಅಪ್ಪಣೆ ಮೀರಲಾಗದೆ ಭಯದಿಂದಲೇ ದೇವಸ್ಥಾನದ ಕಡೆಗೆ ಹೆಜ್ಜೆ ಹಾಕಿದ್ದರು.

ಮನೆಯವರ ಮುಂದೆ ತಲೆ ಸವರಿ ಅವರ ಕೈ ಹಿಡಿದುಕೊಂಡು ಬಂದಿದ್ದ ನಾಗಕ್ಕ ದಾರಿ ಮಧ್ಯೆ ಕೈಬಿಟ್ಟು ದಾರಿಯುದ್ದಕ್ಕೂ ಮುಖ ಸಿಂಡರಿಸಿಕೊಂಡೇ ನಡೆದಳು. ದೇವಸ್ಥಾನಕ್ಕೆ ಸುತ್ತು ಬಂದು ಅಲ್ಲೇ ಕಟ್ಟೆಯ ಮೇಲೆ ಕೂತಳು ನಾಗಕ್ಕ. ಬೆಕ್ಕಿನ ಮರಿಗಳಂತೆ ಹಿಂಬಾಲಿಸಿಕೊಂಡು ಬಂದ ಅಣ್ಣ ತಂಗಿ ಕೊಂಚ ದೂರದಲ್ಲಿ ಪರಸ್ಪರ ಅಂಟಿಕೊಂಡು ಕೂತರು.

"ಇಬ್ರು ಜಾಣ ಮರಿಗಳಿಗೆ ಚಾಕೋಬಾರ್ ಇಷ್ಟ ಆಗ್ತದ?"

ಪರಿಚಿತ ಧ್ವನಿ ಕೇಳಿದೊಡನೆ, ಕತ್ತೆತ್ತಿ ನೋಡಿದರು ಮಕ್ಕಳು. ಕೈಯಲ್ಲೆರಡು ಚಾಕೋಬಾರ್ ಐಸ್ ಕ್ರೀಂ ಹಿಡಿದು ನಿಂತಿದ್ದ ಮಹೇಶ.

"ಹಯ್, ಮಹೇಶಣ್ಣ..." ಮಕ್ಕಳಿಬ್ಬರಿಗೂ ಜೀವ ಬಂದಂತಾಗಿತ್ತು.

ಮಹೇಶ ಇಬ್ಬರಿಗೂ ಐಸ್ ಕ್ರೀಂ ಕೊಟ್ಟು, ಅವರೆಡೆಗೆ ಬಗ್ಗಿ, "ನಾಗಕ್ಕನನ್ನು ಕಂಡರೆ ನಿಮಗೆ ಭಯ ಆಗ್ತದಾ?" ಎಂದು ಪ್ರೀತಿಯಿಂದ ಕೇಳಿದ.

ಇಬ್ಬರೂ ಐಸ್ ಕ್ರೀಂ ಮೆಲ್ಲುತ್ತಲೇ, ಹೌದೆಂಬಂತೆ ತಲೆಯಾಡಿಸಿದರು.